# ವಚನ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಗಳು

ಶ್ರೀನಿವಾಸ ಎಸ್.ಜಿ.

ಅಧ್ಯಾಪಕರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ.

DOI: https://doi.org/10.5281/zenodo.15490768

## ABSTRACT:

'ಕಾಯಕವೇ ಕೈಲಾಸ' ವೆಂದು ಸಾರಿ, ಜನರಲ್ಲಿ ದುಡಿದು ತಿಂದು ಬದುಕುವ ಮಹತ್ವವನ್ನು ತಿಳಿಸಿದ್ದು ವಚನ ಸಾಹಿತ್ಯ. ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳಲ್ಲಿ ಸ್ತ್ರೀಯರಿಗೆ ಭಾಗವಹಿಸುವ ಸಮಾನ ಅವಕಾಶ ನೀಡುವ ಮೂಲಕ ಮಹಿಳಾ ಸ್ವಾತಂತ್ರ್ಯಕ್ಕೊಂದು ಅರ್ಥವನ್ನು ಕಲ್ಪಿಸಿದರು. ಕಲುಷಿತಗೊಂಡಿದ್ದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ದಿಕ್ಕರಿಸಿ, ಘನ ಬದಲಾವಣೆಯನ್ನು ಗುರಿಯಿಟ್ಟು ನಡೆದ ದಾರ್ಶನಿಕ ಚಳುವಳಿ ವಚನ ಸಾಹಿತ್ಯ. ಸಾಮಾಜಿಕ ಬದಲಾವಣೆಗೆ ಹೊಸ ಭಾಷ್ಯ ಬರೆಯುವ ಮೂಲಕ ಉತ್ತಮ ಸಮಾಜ ವ್ಯವಸ್ಥೆಗೆ ನಿಜವಾದ ಅರ್ಥ ಕಲ್ಪಿಸಿ ಕೊಟ್ಟವರು. ಸಮಾಜದ ಕೀಳುಮಟ್ಟದ ಶೋಷಣೆಯಿಂದಾಗಿಯೇ ಸಮಾಜದಲ್ಲಿ ದುಡಿಯುವ ಮತ್ತು ಕೂತು ಉಣ್ಣುವ ವರ್ಗಗಳು ನಿರ್ಮಾಣವಾಗುವುದಕ್ಕೆ ಕಾರಣವಾಗಿರಬೇಕು, ಸಮಾಜದಲ್ಲಿ ಮೇಲ್ವರ್ಗವೆಂದು ಕರೆಸಿಕೊಂಡ ಜನರು ಸಮಾಜದ ಇತರರನ್ನು ಕೀಳಾಗಿ ಕಾಣುತ್ತಿದ್ದ ಸಂದರ್ಭಗಳು ಶರಣರು ತಮ್ಮ ಚಿಕಿತ್ಸಕ ದೃಷ್ಟಿಯಿಂದ ನೋಡಿದಾಗ ಸಾಮಾಜಿಕ ಅಸಮಾನತೆಯೆಂಬ ಸಾಮಾಜಿಕ ರೋಗಗಳಿಗೆ ಮದ್ದು ಅರೆದದುರ ಪರಿಣಾಮದಿಂದಲೇ ಅವರ ಮನಸ್ಸಿನ ವಿಚಾರಗಳೆಲ್ಲ ವಚನಗಳಾಗಿ ಮಾರ್ಪಟ್ಟವಾಗಿರಬೇಕು. ಅಂದಿನಿಂದಲೇ ಬಸವಣ್ಣನವರ ನೇತೃತ್ವದಲ್ಲಿ ಶರಣರು ಸಾಮಾಜಿಕ ಬದಲಾವಣೆಗೆ ಕ್ರಾಂತಿಕಾರಿ ಹೆಜ್ಜೆ ಇಟ್ಟರೆಂದು ಕಾಣಿಸುತ್ತದೆ. ಅವರ ವಚನಗಳ ಮೂಲಕ ಸಾಮಾಜಿಕ ವ್ಯವಸ್ಥೆಯ ಅಂಕುಡೊಂಕುಗಳನ್ನು ತಿದ್ದಿ, ಸಮ ಸಮಾಜ ವ್ಯವಸ್ಥೆಯನ್ನು ಸರಿಪಡಿಸುವ ಕಾಯಕಕ್ಕೆ ಮುಂದಾದರು. ಒಂದಷ್ಟು ಸಮಾಜ ವ್ಯವಸ್ಥೆಯನ್ನು ಬದಲಿಸಲು ಪಟ್ಟ ಪ್ರಯತ್ನ ಇಂದಿಗೂ ಮುಂದಿಗೂ ಮಾದರಿಯಾಗುವಂತಿದೆ. ಸಮಾಜದ ಬಗೆಗೆ ಅವರಿಗಿದ್ದ ಕಾಳಜಿಯಿಂದಾಗಿಯೇ ಸಮಾಜ ಬದಲಾಣೆ ಕಾಣಲು ಸಾಧ್ಯವಾಯಿತು.

ಕಾಯಕ ಜೀವಿಗಳ ಹೋರಾಟವಾಗಿ ರೂಪುಗೊಂಡ ವಚನ ಚಳವಳಿಯಲ್ಲಿ ಮಹಿಳಾ ಸಮಾನತೆಯ ಆಶಯಗಳು ಸಹಜವಾಗಿಯೇ ಅಡಕವಾಗಿದ್ದವು. ಸಾಮಾಜಿಕ ಸಮಾನತೆ ಆಶಯವೇ ಪ್ರಮುಖವಾದ ವಚನ ಚಳವಳಿ ಮಹಿಳಾ ಸಮಾನತೆಯನ್ನು ಪ್ರತ್ಯೇಕಿಸಿ ನೋಡಲಿಲ್ಲ. ಕ್ರಾಂತಿಯೊಳಗಿನ ಕ್ರಾಂತಿ ಎಂಬಂತೆ ನಡೆಯಿತು. ಪರ್ಯಾಯ ಚಿಂತನೆ, ಪರ್ಯಾಯ ಸಂಸ್ಕೃತಿ ಅಶಯವೂ ಸೇರ್ಪಡೆಗೊಂಡಿತ್ತು, ಶ್ರಮಸಂಸ್ಕೃತಿ ರೂಪುಗೊಳ್ಳುವುದು ಹೆಣ್ಣಿನ ಶ್ರಮದಿಂದ ಎಂದು 12ನೇ ಶತಮಾತನದ ವಚನಕಾರ್ತಿಯರು ಪ್ರತಿಪಾದಿಸಿದ್ದರು. ಹೀಗಾಗಿ ವಚನ ಚಳವಳಿಯಲ್ಲಿ ಮಹಿಳಾ ಸಮಾನತೆ ಅಂತರ್ಗತವಾಗಿತ್ತು. ಹೀಗಾಗಿಯೇ ವಚನಗಳಲ್ಲಿ ಮಹಿಳಾ ಸಮಾನತೆಯ ಆಶಯ ಚಳವಳಿಯ ಜತೆಜತೆಗೇ ಸಾಗಿತು. ಅಗ್ರಹಾರ ಶ್ರೇಷ್ಠ ಎನ್ನುವ ಸಂದರ್ಭದಲ್ಲೇ ಕಾಯಕ ಶ್ರೇಷ್ಠ ಎನ್ನುವ ಸಾಮಾಜಿಕ ಸಮಾನತೆಯ ಆಶಯವನ್ನು ವಚನ ಚಳವಳಿ ಪ್ರಕಟಿಸಿತು

ಅರಮನೆ, ದೇವಾಲಯ ಸಂಸ್ಕೃತಿಗಳನ್ನು ವಚನ ಚಳವಳಿ ವಿರೋಧಿಸಿತು. ದೇವರು, ಅರಮನೆ, ಧರ್ಮದ ಸಂಕೋಲೆಯಿಂದ ಬಿಡಿಸಿ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನ ಮಾಡಿದರು.

ಭಾರತೀಯ ಸಾಹಿತ್ಯದಲ್ಲಷ್ಟೇ ಅಲ್ಲದೆ ಜಾಗತಿಕ ಸಾಹಿತ್ಯದಲ್ಲಿ ವಚನಕಾರರ ಧ್ವನಿ ವಿಶಿಷ್ಟ ವಿಸ್ತರವಾದುದು ತಾವು ತುಳಿದು ಬಂದ ತಾತ್ವಿಕ ಪರಂಪರೆಯನ್ನೇ ವಿಮರ್ಶಿಸಿ ವಿರೋಧಿಸಿ ಹೊಸ ತಾತ್ವಿಕ ಪರಂಪರೆಯನ್ನು ನಿರ್ಮಿಸಲು/ಕಟ್ಟಲು ಯತ್ನಿಸಿದರು 'ನಾ ಭೂತೋ ನಾ ಭವಿಷ್ಯತಿ' ಎನ್ನುವಂತಹ ಕ್ರಾಂತಿಕಾರಿ ಚಿಂತನಧಾರೆ ಒಂದನ್ನು ನಿರ್ಮಿಸಿಕೊಟ್ಟರು 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ' ಎಂಬುದನ್ನು ಮಹಾಮಂಟಪ ಅನುಭವಮಂಟಪ ವಾಗಿಸಿಕೊಂಡವರು ಹಿಂದಿನ ಪರಂಪರೆಗಳು 'ಎಲ್ಲೂ ಸಲ್ಲದ'ವರನ್ನಾಗಿಸಿದವರನ್ನು, ಇಲ್ಲಿಯೂ ಎಲ್ಲೆಲ್ಲಿಯೂ ಸಲ್ಲುವಂತೆ ಮಾಡಿದರು. ಅವರು ವಿಶ್ವ ಶಿವಶರಣ ದೊಳಗೆ 'ವಿಶ್ವಮಾನವ'ರನ್ನಾಗಿ ರೂಪಿಸಿದರು ಸಮಸ್ತ ಜೀವ ರಾಶಿಯಲ್ಲೂ ದೈವಿಪ್ರಭೆ ಹುಡುಕಲು ಯತ್ನಿಸಿದ ಉಪನಿಷತ್ತುಗಳಲ್ಲಿನ ಬೋಧನೆಗಳು ಕಟ್ಟಕಡೆಯ ಮಾನವರನ್ನು ತಲುಪದೆ ಅವರು ತಿರಸ್ಕೃತರಾದದುಕ್ಕೆ ಕಾರಣವಾದ ತಂತು ಯಾವುದು? ಸಂಕುಚಿತ ಆಚಾರಗಳು ಕ್ಷುದ್ರ ಚಿಂತನೆಗಳು, ಧರ್ಮದ ಹೆಸರಲ್ಲಿ ಹೇಗೆ ನುಸುಳಿದವು? ಅರಮನೆಗಳು ಗುರುಮನೆಗಳಾಗದೆ ಉಳಿಯಲು ಕಾರಣವೇನು? ಧರ್ಮ ದಯೆ ಇಲ್ಲದಂತೆ ಆಗಲು ಕಾರಣವಾದ ಅಧರ್ಮದ ತಿರುಳಾವುದು? ಮುಂತಾದ ಮುಖ್ಯ ಪ್ರಶ್ನೆಗಳನ್ನು ಚಿಕಿತ್ಸಕ ದೃಷ್ಟಿಯಿಂದ ಎತ್ತಿದ್ದಷ್ಟೇ ಅಲ್ಲದೆ ಸಾಮಾಜಿಕ ಚಿಕಿತ್ಸೆಗಳನ್ನೂ ಮಾಡಲತ್ನಿಸಿದವರು ವಚನಕಾರರು ಇವರ ಸಾಮಾಜಿಕ ಚಿಂತನ ಕ್ರಮಗಳು ಅಗ್ರಗಣ್ಯವೆನಿಸಿವೆ.

ವಚನ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆಗಳು ಎಂಬ ಈ ಲೇಖನವನ್ನು ಈ ಕೆಳಗಿನ ಪ್ರಮುಖ ಮುಖ್ಯಾಂಶಗಳಲ್ಲಿ ವಿಸ್ತರಿಸಲಾಗಿದೆ.

**KEYWORDS:**

ಸಾಮಾಜಿಕ ಚಿಂತನೆಗಳು, ಸಾಮಾಜಿಕ ಸಮಾನತೆ, ಲಿಂಗ ಸಮಾನತೆ, ಮೌಢ್ಯವಿರೋಧಿ ನಡೆ, ವಚನ ಸಾಹಿತ್ಯ.

ಭಾರತೀಯ ಸಾಹಿತ್ಯದಲ್ಲಷ್ಟೇ ಅಲ್ಲದೆ ಜಾಗತಿಕ ಸಾಹಿತ್ಯದಲ್ಲಿ ವಚನಕಾರರ ಧ್ವನಿ ವಿಶಿಷ್ಟ ವಿಸ್ತರವಾದುದು ತಾವು ತುಳಿದು ಬಂದ ತಾತ್ವಿಕ ಪರಂಪರೆಯನ್ನೇ ವಿಮರ್ಶಿಸಿ ವಿರೋಧಿಸಿ ಹೊಸ ತಾತ್ವಿಕ ಪರಂಪರೆಯನ್ನು ನಿರ್ಮಿಸಲು/ಕಟ್ಟಲು ಯತ್ನಿಸಿದರು 'ನಾ ಭೂತೋ ನಾ ಭವಿಷ್ಯತಿ' ಎನ್ನುವಂತಹ ಕ್ರಾಂತಿಕಾರಿ ಚಿಂತನಧಾರೆ ಒಂದನ್ನು ನಿರ್ಮಿಸಿಕೊಟ್ಟರು 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ' ಎಂಬುದನ್ನು ಮಹಾಮಂಟಪ ಅನುಭವಮಂಟಪ ವಾಗಿಸಿಕೊಂಡವರು ಹಿಂದಿನ ಪರಂಪರೆಗಳು 'ಎಲ್ಲೂ ಸಲ್ಲದ'ವರನ್ನಾಗಿಸಿದವರನ್ನು, ಇಲ್ಲಿಯೂ ಎಲ್ಲೆಲ್ಲಿಯೂ ಸಲ್ಲುವಂತೆ ಮಾಡಿದರು. ಅವರು ವಿಶ್ವ ಶಿವಶರಣ ದೊಳಗೆ 'ವಿಶ್ವಮಾನವ'ರನ್ನಾಗಿ

ರೂಪಿಸಿದರು ಸಮಸ್ತ ಜೀವ ರಾಶಿಯಲ್ಲೂ ದೈವಿಪ್ರಭೆ ಹುಡುಕಲು ಯತ್ನಿಸಿದ ಉಪನಿಷತ್ತುಗಳಲ್ಲಿನ ಬೋಧನೆಗಳು ಕಟ್ಟಕಡೆಯ ಮಾನವರನ್ನು ತಲುಪದೆ ಅವರು ತಿರಸ್ಕೃತರಾದದುಕ್ಕೆ ಕಾರಣವಾದ ತಂತು ಯಾವುದು? ಸಂಕುಚಿತ ಆಚಾರಗಳು ಕ್ಷುದ್ರ ಚಿಂತನೆಗಳು, ಧರ್ಮದ ಹೆಸರಲ್ಲಿ ಹೇಗೆ ನುಸುಳಿದವು? ಅರಮನೆಗಳು ಗುರುಮನೆಗಳಾಗದೆ ಉಳಿಯಲು ಕಾರಣವೇನು? ಧರ್ಮ ದಯೆ ಇಲ್ಲದಂತೆ ಆಗಲು ಕಾರಣವಾದ ಅಧರ್ಮದ ತಿರುಳಾವುದು? ಮುಂತಾದ ಮುಖ್ಯ ಪ್ರಶ್ನೆಗಳನ್ನು ಚಿಕಿತ್ಸಕ ದೃಷ್ಟಿಯಿಂದ ಎತ್ತಿದ್ದಷ್ಟೇ ಅಲ್ಲದೆ ಸಾಮಾಜಿಕ ಚಿಕಿತ್ಸೆಗಳನ್ನೂ ಮಾಡಲತ್ನಿಸಿದವರು ವಚನಕಾರರು ಇವರ ಸಾಮಾಜಿಕ ಚಿಂತನ ಕ್ರಮಗಳು ಅಗ್ರಗಣ್ಯವೆನಿಸಿವೆ.

**ಅಧ್ಯಯನದ ವೈದಾನಿಕತೆ:**

ತನ್ನ ಅಸ್ಮಿತೆಯ ಬೇರುಗಳನ್ನೇ ಕಡಿದುಕೊಂಡು ತೊಳಲಾಡುತ್ತಿರುವ ಜನತೆಗೆ ವಚನಕಾರರು ನಂಬುಗೆಯ ಕೈ ನೀಡಿ ಬರಸಳೆದು ನಿಜದ ದಾರಿಯ ತೋರುಗಂಬವಾದರು. ಭಕ್ತಿ, ಜ್ಞಾನ, ಸಮಾನತೆ, ದಾಸೋಹ, ಕಾಯಕ ತತ್ವಗಳ ಆಧಾರಿತ ನವಸಮಾಜದ ನಿರ್ಮಿತಿಯಲ್ಲಿ ದಾರಿಗಂಬಳಾದರು ಇಂತಹ ವಚನಕಾರರ ಬಗೆಗೆ ಈ ಸಂಶೋಧನಾ ಲೇಖನವು ವಿಶ್ಲೇಷಣಾ ಮಾದರಿ (ಅನಾಲಿಸಿಸ್ ಮಾಡೆಲ್) ಯನ್ನು ಅನುಸರಿಸಿದೆ. ವಚನಕಾರರು ಅನುಸರಿಸಿದ ತಾತ್ವಿಕ, ನೈತಿಕ, ಭಕ್ತಿ ಕಾಯಕ ಮುಂತಾದ ಮೌಲ್ಯಗಳನ್ನು ಪ್ರತಿಪಾದಿಸುವ ಜನಪ್ರಿಯ ವಚನಗಳ ವಿಸ್ತೃತ ಅಧ್ಯಯನ ನಡೆಸುವುದರಿಂದ ವಚನಕಾರರ ಸಾಮಾಜಿಕ ಸಂದೇಶವು ಸಾಹಿತ್ಯ ಅಭ್ಯಾಸ ಮಾಡುವವರಿಗೆ ಅನುಕರಣೀಯ

**ಎಮ್ಮ ವಚನದೊಂದು ಪಾರಾಯಣಕ್ಕೆ**
**ವ್ಯಸನದೊಂದು ಪುರಾಣ ಸಮ ಬಾರದಯ್ಯ**
**ಎಮ್ಮ ವಚನದ ನೂರೆಂಟರಧ್ಯಯನಕ್ಕೆ**
**ಶತರುದ್ರಿಯ ಯಾಗ ಸಮಬಾರದಯ್ಯ**

ಎಂಬ ಸಿದ್ದರಾಮೇಶ್ವರನ ವಚನದಂತೆ ಅಭ್ಯಾಸ ಮಾಡುವುದೆಂದರೆ ಪ್ರಬುದ್ಧನಾಗುವುದು ಎನ್ನುತ್ತಾನೆ ಜೊತೆಗೆ 'ಆದ್ಯರ ವಚನವ ಹೇಳಿದವರೆಲ್ಲ ಪುರಾತರು ನೋಡ ಭವಭವದಲ್ಲಿ' ಹಾಗೂ 'ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯ, ವಚಿಸಿ ಅನುಭವಿಯಾದವ ಪಂಡಿತನಯ್ಯಾ' ಎನ್ನುತ್ತಾನೆ. ಓದು/ಅಧ್ಯಯನ, ಪಾಂಡಿತ್ಯ ಅಥವಾ ಪ್ರಭುದ್ಧತೆ ತಂದುಕೊಡಬೇಕೆನ್ನುವುದು ಅವನ ಇರಾದೆ ಆದ್ದರಿಂದ ವಚನಕಾರ ಸಾಮಾಜಿಕ ಚಿಂತನೆಗಳನ್ನು ಅವರ ಸಮಾಜ ಕೇಂದ್ರಿತ ಚಿಂತನೆಗಳನ್ನು ಬಿತ್ತುವ ವಚನಗಳ ಮುಖಾಂತರವೇ ಹಲವು ಉಲ್ಲೇಖಗಳ ಹಿನ್ನಲೆಯಲ್ಲಿ ವಿಶ್ಲೇಷಿಸಿ ಶರಣರ ಚಿಂತನೆ ಸಮಾಜದ ಮೇಲೆ ಬೀರಿರುವ ಪರಿಣಾಮಗಳ ಹಿನ್ನಲೆಯಲ್ಲಿ ಪ್ರಸ್ತುತ ಲೇಖನವನ್ನು ಮಂಡಿಸಲಾಗುತ್ತಿದೆ

**ಉದ್ದೇಶ ಮತ್ತು ವ್ಯಾಪ್ತಿ:**

ವಚನಕಾರರು ನಡೆಸಿದ ಚಳುವಳಿ ಸಮಾಜೋಧಾರ್ಮಿಕ ಸಾಹಿತ್ಯಿಕ ಕ್ರಾಂತಿಗೆ ಒಂದು ವಿಶಿಷ್ಟ ಅಭಿಯಕ್ತಿಯಾದದು 'ವಚನ' ಎಂಬುದು ವಿಶಿಷ್ಟ ಅಭಿವ್ಯಕ್ತಿಯ 'ಬಂಧ' 12ನೇ ಶತಮಾನದಲ್ಲಿ ಬದುಕಿ ಬಾಳಿ ಕಣ್ಮರೆಯಾದ ಪ್ರತಿಕ್ರಾಂತಿ, ಈ ಕ್ರಾಂತಿ ದಿಢೀರನೆ ಕಣ್ಮರೆಯಾಗಲು ಕಾರಣವೇನು? ಈ ಸಂಶೋಧನೆಗೆ ಎಟುಕಿಗೆ ನಿಲುಕಬಹುದಾದ ವಿಷಯ, ಕ್ರಾಂತಿಯೊಂದು ದುತ್ ಎಂದು ಕ್ಷಣಾರ್ದದಲ್ಲಿ ನಿರ್ಗಮಿಸಲು ಕಾರಣವಾಗಿರಬಹುದಾದ ತೀವ್ರತರವಾದಂತಹ ಸಾಮಾಜಿಕ ಸುಧಾರಣೆಗಳ ಸ್ವರೂಪ ಯಾವ ರೀತಿಯಲ್ಲಿರಬಹುದು? ಹೀಗೆ ಮಿಂಚಿನಂತ ವಿದ್ಯುತ್ ಆಘಾತ ನೀಡಿದಂತೆ ರೀತಿಯಲ್ಲಿ ಶರಣರ ಸಾಮಾಜಿಕ ಸಂದೇಶಗಳಿದ್ದಿದ್ದರೆ ಅಂದಿನ ಸಮಾಜದಲ್ಲಿದ್ದ ಧಾರ್ಮಿಕ ಸ್ವಾತಂತ್ರ್ಯದ ಗುತ್ತಿಗೆದಾರಿತನ, ಜಾತಿ ಪದ್ಧತಿ, ತಾರತಮ್ಯ ವೆಂಬ ಅಕ್ಟೋಪಸ್ ಬಿಗಿತದ ಔನತ್ಯ, ಇವೆಲ್ಲವೂ ಕಾಲದೊಂದಿಗೆ ಉರುಳಿ ಅಸಹನೆಯ ತುತ್ತತುದಿ ತಲುಪಿರಬೇಕು ಇಂತಹ "ಸಂಗ್ರಹಿತವಾದ ತಪ್ಪುಗಳ ಕಟ್ಟಕಡೆಯ ಸ್ಥಿತಿಯ ಪರಿಣಾಮವೇ ಕ್ರಾಂತಿ" (ಡ್ಯುರಾಂಟ್) ಈ ಕ್ರಾಂತಿಯ ಆಸ್ಫೋಟಣೆಯನ್ನು ಪ್ರಬಲವಾಗಿಯೇ ಹುಟ್ಟಡಗಿಸಿರಬಹುದು ಆದ ಕಾರಣ ಈ ಶರಣರ ತೀವ್ರವಾದ ಸಾಮಾಜಿಕ ಚಿಂತನೆಯ ಸಾರಗಳು ಬಹಳ ವಿಸ್ತಾರವಾಗಿ ಹರಡಿಕೊಂಡಿವೆ ಆದರೆ ಲೇಖನದ ಉದ್ದೇಶ ನಿರ್ದಿಷ್ಟ ಚೌಕಟ್ಟಿಗೆ ಒಳಪಟ್ಟಿರುವುದರಿಂದ ವಚನಕಾರರ ಸಾಮಾಜಿಕ ಸಂದೇಶವನ್ನು ಅವರ ವಚನಗಳ ಸಾಮಾಜಿಕ ದೃಷ್ಟಿಕೋನದಿಂದ ನೋಡುವ ಉದ್ದೇಶದ ಜೊತೆಗೆ ಶರಣರ ಕೊಡುಗೆಯನ್ನು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವ ನೋಟದ ಸಂಗ್ರಹಿತ ದಿಕ್ಕಿನೆಡೆಗೆ ಈ ಲೇಖನದ ಅಧ್ಯಯನದ ವ್ಯಾಪ್ತಿ ವಿಸ್ತರಿಸಿದೆ

**ಶರಣರ ಸಾಮಾಜಿಕ ಚಿಂತನೆಗಳು:**

ಶರಣರ ಬಹುಮುಖಿಯಾದ ಚಿಂತನೆಗಳು ಕನ್ನಡದ ಮಧ್ಯಕಾಲೀನ ಇತಿಹಾಸದಲ್ಲಿ ಹಲವು ಸ್ಥಿತ್ಯಂತರಗಳಿಗೆ ಕಾರಣವಾಯಿತು ಈ ಕಾಲಮಾನದ ಸಾಹಿತ್ಯದಲ್ಲಿ ಪ್ರಕಟಗೊಂಡ ಪ್ರಖರವಾದ ಸಾಮಾಜಿಕ ಪ್ರಜ್ಞೆ ಸಾಮಾಜಿಕ ಸಮಸ್ಯೆಗಳಿಗೆ ಕೊಡಲಿ ಪೆಟ್ಟು ನೀಡುವಂತಹ ನಿಟ್ಟಿನಲ್ಲಿ ಶರಣರು ಸಾಮೂಹಿಕವಾಗಿ ನಡೆಸಿದ ಪ್ರಯತ್ನಗಳು ಬಹುದೊಡ್ಡ ಸಾಮಾಜಿಕ ಚಳುವಳಿಯೇ ಆಗಿತ್ತು. ಸಾಮಾಜಿಕ ಸಮಾನತೆ, ಶೋಷಣೆ ಮುಕ್ತ, ಮೌಢ್ಯ ರಹಿತ, ಸಮಾಜವನ್ನು ತಮ್ಮ ಪರಿಪಕ್ವ ಆಲೋಚನೆಗಳಿಂದ, ಚಿಂತನಗಳಿಂದ ಸಾಮಾಜಿಕ ಅಪಸವ್ಯಗಳನ್ನು ಸಾರಾಸಗಟಾಗಿ ಕಿತ್ತೊಗೆಯಲು ಪ್ರಯತ್ನಿಸಿರುವುದನ್ನು ಕಾಣಬಹುದು. ಸಾಮಾನ್ಯರ ಬದುಕಿನ ಮೇಲೆ ಪರಂಪರಾಗತವಾಗಿ ಕವಿತಿದ್ದ ಮೌಢ್ಯದ ಕಾರ್ಮೋಡವನ್ನು ತಮ್ಮ ತೀಕ್ಷ್ಣ ಚಿಂತನೆಗಳಿಂದ ಹಿಮ್ಮೆಟ್ಟಿಸಿದರು ದಾಸೋಹ ಕಾಯಕ ಲಿಂಗ ಜಂಗಮ ಮುಂತಾದ

ಅಸ್ಮಿತೆಗಳಿಂದ ಸಮಾಜದ ಪುನರ್ ನಿರ್ಮಾಣಕ್ಕೆ ಕೈ ಹಾಕಿದರು

**ಸಾಮಾಜಿಕ ಸಮಾನತೆ:**

ಭಾರತೀಯ ಸಮಾಜ ಜಾತಿ ಆಧಾರಿತ ಸಮಾಜವಾದ್ದರಿಂದ ಶರಣರ ಬದುಕಿನ ಕಾಲದ ಸಮಾಜವೂ ಇದಕ್ಕೆ ಭಿನ್ನವಾಗೇನೂ ಇರಲಿಲ್ಲ ಭಾರತೀಯ ಸಮಾಜವು ಸಾಮಾಜಿಕ ಸಮಾನತೆಯನ್ನು ಎಂದೂ ಮಾನ್ಯ ಮಾಡಿದುದಲ್ಲ.

ಮೇಲ್ನೋಟಕ್ಕೆ ಒಂದೇ ದೈವ, ಒಂದೇ ನಂಬಿಕೆ ಇತ್ಯಾದಿ ರೂಪದಲ್ಲಿ 'ಒಂದೇ' ಎಂಬಂತೆ ಕಂಡರು ಆಂತರ್ಯದಲ್ಲಿ ಚಿದ್ರಗೊಂಡ ಸಮಾಜವಾಗಿತ್ತು. ಇಂತಹ ಹಲವು ಜಾತಿಗಳನ್ನು ಒಂದೇ ನೆಲೆಗಟ್ಟಿನಲ್ಲಿ, ಒಂದೇ ದೈವವನ್ನು ಒಪ್ಪಿಕೊಳ್ಳುವ ಮೂಲಕ ಸಂಘಟಿಸಲ್ಪಟ್ಟಿದ್ದರಿಂದ ಈ ಚಳುವಳಿ ಸಹಜವಾಗಿಯೇ ಜನರಿಂದ ಜನರಿಗಾಗಿ ಎಂಬ ಪ್ರಜಾತಾಂತ್ರಿಕ ಆಯಾಮವನ್ನು ಪಡೆದುಕೊಂಡಿತ್ತು.

ಕಾಯಕ ಜೀವಿಗಳು ತಾವಾಗಿಯೆ ತಮ್ಮ ಜಾತಿಗಳನ್ನು ಬದಿಗಟ್ಟು ಕಾಯಕಗಳನ್ನು ಉಳಿಸಿಕೊಂಡು ಸ್ವಾಭಿಮಾನದ ಮೇಲು ಕೀಳಿಲ್ಲದ ವಿಶಾಲ ಜನಜೀವನದಲ್ಲಿ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಸಾಧ್ಯವಾಯಿತು. ವ್ಯಸನ ಪೀಡಿತ ಜಡ ಪರಂಪರೆಯಂದು ಜನಸಾಮಾನ್ಯರನ್ನು ಕಾಡಲಾರಂಭಿಸಿದಾಗ ಜನರೇ ಹಲವು ದೈವ, ಹಲವು ಸಂಸ್ಕೃತಿಗಳ ಜನರು ತಾವಾಗೆÀ ಏಕತೆಯ ಚಳುವಳಿಗೆ ಅರ್ಪಿಸಿಕೊಂಡರು ಜಾತಿ ಕುಲಕ್ಕಿಂತ ನುಡಿ ಮುಖ್ಯ, ನಡೆ ಮುಖ್ಯ ಎಂದು ಭಾವಿಸಿದರು.

**ಕುಲವೆಂದು ಹೋರಾಡುವ ಅಣ್ಣಗಳಿರ ಕೇಳಿರೋ**
**ಕುಲವೇ ಡೋಹರನ? ಕುಲವೇ ಮಾದರನ?**
**ಕುಲವೇ ದುರ್ವಾಸನ? ಕುಲವೇ ವ್ಯಾಸನ?**
**ಕುಲವ ನೋಳ್ಪಡೆ ಹುರುಳಿಲ್ಲ ಅವರ ನಡೆಯ**
**ನೊಳ್ಪಡೆ ಹುರುಳಿಲ್ಲ ಅವರ ನಡೆ ನೊಳ್ಪಡೆ**
**ನಡೆಯುವವರು ತ್ರಿಲೋಕದಲ್ಲಿಲ್ಲ**
**ಕಪಿಲಸಿದ್ಧ ಕಪಿಲ ಸಿದ್ದ ಚನ್ನಮಲ್ಲಿಕಾರ್ಜುನ**

ತಳ ಸಮುದಾಯದಲ್ಲಿ ಹುಟ್ಟಿಯೂ ಹಿರಿಮೆಯನ್ನು ಕಂಡಂತಹ ಶರಣರನ್ನು ಹೇಗೆ ನೋಡಬೇಕು ಎನ್ನುವುದನ್ನ ಸಿದ್ದರಾಮೇಶ್ವರನ ಈ ವಚನದ ದರ್ಶನ ಮಾಡುಸುತ್ತದೆ.

**ಊರ ಒಳಗಣ ಬಯಲು**
**ಊರ ಹೊರಗಣ ಬಯಲೆಂದುಂಟೇ**
**ಊರೊಳಗೆ ಬ್ರಾಹ್ಮಣ ಬಯಲು**
**ಹೂರ ಹೊರಗೆ ಹೊಲೆ ಬಯಲೆಂದುಂಟೇ**

**ಎಲ್ಲಿ ನೋಡಿದೆಡೆ ಬಯಲೊಂದೆ**

ಎಲ್ಲಾ ಲೌಕಿಕದ ಹಂಗಿನಿಂದ ಹೊರನಿಂತು ಬಯಲಿಗೆ ಜಾತಿ ಹಂಗಿಲ್ಲ ಕನಿಷ್ಠರಿಗೊಂದು ಶ್ರೇಷ್ಠರಿಗೊಂದು ಎಂಬ ಬಯಲಿನ ಕಲ್ಪನೆಯೇ ಮಿತ್ಯೆ ಎಂದು ಬೊಂತಾದೇವಿ ತರ್ಕಿಸುತ್ತಾಳೆ. ತಿನ್ನುವ ಆಹಾರದಲ್ಲೂ ಕನಿಷ್ಠ ಶ್ರೇಷ್ಠತೆಯನ್ನು ತಾರತಮ್ಯವನ್ನು ಶರಣರೂ ಎದುರಿಸಿದ್ದಾರೆ. ಅದು ಹುಟ್ಟು ಹಾಕಿರುವ ತಾರತಮ್ಯ ನೀತಿಯನ್ನು ಖಂಡಿಸಿದ ಕಾಳವ್ವೇ ಆಹಾರದಲ್ಲಿ ಜಾತಿ ಶ್ರೇಷ್ಠತೆಯ ವ್ಯಸನವನ್ನು ಪ್ರಶ್ನಿಸುತ್ತಾಳೆ

**ಕುರಿ ಕೋಳಿ ಕಿರಿ ಮೀನು ತಿಂದವರಿಗೆಲ್ಲ**
**ಕಲಜ ಕುಲಜ ರಂದೆಂಬರು**
**ಶಿವನಿಗೆ ಪಂಚಾಮೃತ ಕರೆವ ಪಶುವ ತಿಂಬ**
**ಮಾದಿಗ ಕೀಳುಜಾತಿ ಕೀಳು ಜಾತಿಯೆಂಬರು**
**ಅವರೆಂತ ಕೀಳು ಜಾತಿಯಾದರು?**

ಆಹಾರದೊಳಗೆ ಜಾತಿ ಬೇರೆತರೆ ಅದು ಸಮಾಜದ ಸ್ವಾಸ್ತ್ಯವನ್ನು ಹಾಳು ಮಾಡುವುದಲ್ಲದೆ ತಿನ್ನುವ ಆಹಾರದಿಂದ ಯಾರೂ ಮೇಲಾಗುವುದಿಲ್ಲ ಎಂಬ ನ್ಯಾಯದ ಧ್ವನಿಯನ್ನು ಕಾಳವ್ವೇ ಎತ್ತುತ್ತಾಳೆ. ಸಾಮಾಜಿಕ ಸಮಾನತೆಯ ಹೋರಾಟ ಕೇವಲ ಕೆಲವರೆಗೆ ಮಾತ್ರ ಸೀಮಿತವಾಗಿರಲಿಲ್ಲ. ಅಲ್ಲಮ ಕಕ್ಕಯ್ಯ ಸಿದ್ದರಾಮ ಹರಳಯ್ಯ ಮಾಚಯ್ಯ ಹೀಗೆ ನೂರಾರು ಶರಣರು ಬೆನ್ನೆಲುಬಾಗಿ ನಿಂತು ಸಾಮೂಹಿಕ ಆಂದೋಲನವಾಗಿ ಮಾರ್ಪಡಿಸಿದರು ಹಿರಿಕಿರಿಯರನ್ನು ಒಟ್ಟಿಗೆ ಕರೆದೊಯ್ಯುವ ವಿನಯ ಬಸವಣ್ಣನವರಲ್ಲಿತ್ತು. ಎನಗಿಂತ ಕಿರಿಯರಿಲ್ಲ ಎಂಬ ಮಾತು ಅವನ ಸೌಜನ್ಯ ಗುಣಕ್ಕೆ ಒಪ್ಪಿದಂತೆ ಇತ್ತು. ಅವನ ವ್ಯಕ್ತಿತ್ವವನ್ನು ಅವನ ವಚನಗಳೇ ಸಾರುತ್ತವೆ.

**ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ**
**ಕೀಳಾಗಲ್ಲದೆ ಹಯನು ಕರೆವುದೇ**
**ಮೇಲಾಗಿ ನರಕದ ಲೋಲಾಡಲಾರೆನು**
**ನಿಮ್ಮ ಶರಣರ ವಾದಕ್ಕೆ ಕೀಳಾಗಿರಿಸು**
**ಮಹಾದಾನಿ ಕೂಡಲಸಂಗಮದೇವ**

ಸಾಮಾಜಿಕ ತಾರತಮ್ಯವನ್ನು ಉಸಿರಾಡುತ್ತಿದ್ದ ಧರ್ಮ ನಂಬಿಕೆಗಳಿಗೆ ವಚನಕಾರರೂ ಪ್ರಗತಿಪರ ಚಿಂತನೆಗಳು ದಾಳಿ ಮಾಡುತ್ತಿದ್ದವು. ಸುವರ್ಣತೆಯ ಬೆಳಕು ಹರಿಯಲು ಅಡ್ಡಿಯಾಗಬಹುದಾದ ಎಲ್ಲಾ ತಡೆಗಳನ್ನು ಮುರಿಯಲು ಯತ್ನಿಸಿದರು.

**ಲಿಂಗ ಸಮಾನತೆ:**

ವಚನ ಸಾಹಿತ್ಯದಲ್ಲಿ ಪುರುಷರಂತೆ ಸ್ತ್ರೀಯರಿಗೂ ಸಮಾನ ಅವಕಾಶ

ಹಕ್ಕುಗಳ ಗೌರವಗಳು ಇದ್ದುದ್ದರ ಬಗ್ಗೆ ತಿಳಿಯುತ್ತದೆ ಅಕ್ಕಮಹಾದೇವಿಯಂತೆ ಹಲವು ಜನ ಶಿವಶರಣೆಯರು ಇದ್ದರು ಹಲವು ಜನ ಶಿವಾನುಭವ ಮಂಟಪದ ಚರ್ಚೆಗಳ ಭಾಗವಾಗಿದ್ದರು. ಈ ಶಿವಶರಣರ ಬದುಕನ್ನ ಮೌಲ್ಯಗಳು ಹಲವು ಕ್ರಾಂತಿಕಾರಕ ಅಂಶಗಳನ್ನು ಒಳಗೊಂಡಿರುವುದನ್ನು ಕಾಣಬಹುದು. ಮೊಟ್ಟ ಮೊದಲಿಗೆ ಲಿಂಗ ಬೇದದ ವಿರೋಧದಲ್ಲಿ ತಾತ್ವಿಕ ಮತ್ತು ಆಧ್ಯಾತ್ಮಿಕ ಪಾತಳಿಯಲ್ಲಿ ಧ್ವನಿ ಎತ್ತಿ ಘೋರ ಅನ್ಯಾಯದೆಡೆಗೆ ಪಾರಂಪರಿಕ ದೃಷ್ಟಿಯನ್ನು ತ್ಯಜಿಸಿ ಸತ್ಯನಿಷ್ಠವಾದ ಜ್ಞಾನ ಸಿದ್ಧಾಂತದ ಆಧಾರದ ಮೇಲೆ ಸಮಾಜವನ್ನು ಉದ್ಯಕ್ತಗೊಳಿಸಿದರು. ಆಯ್ದಕ್ಕಿ ಲಕ್ಕಮ್ಮ ಹೇಳುತ್ತಾಳೆ.

**"ಕೂಡಕ್ಕೆ ಸತಿ-ಪತಿಯೆಂಬ ನಾಮವಲ್ಲದೆ**
**ಅರಿವಿಂಗೆ ಬೇರೊಂದೂಡಲುಂಟೆ"**

ಸ್ತ್ರೀ ಪುರುಷರ ಸಂಬಂಧದಿಂದಾಗುವ ಅನುಭವ ಯಾವುದೇ ಹೆಸರಿದ್ದರೂ ಯಾವ ರೀತಿ ಒಂದೇ ಆಗಿರುತ್ತದೋ ಅದೇ ತರಹ ಸ್ತ್ರೀ ಪುರುಷ ಭೇದವಿಲ್ಲದೆ ಒಂದೇ ಆಗಿರುತ್ತದೆ. ಆದ್ದರಿಂದ ಇಲ್ಲಿ ಭೇದ ಕಲ್ಪಿಸುವುದು ತರವಲ್ಲ ಎನ್ನುತ್ತಾಳೆ.

**ಮೊಲೆ ಮುಡಿ ಬಂದರೆ ಹೆಣ್ಣೆಂಬರು**
**ಮೀಸೆ ಕಾಸೆ ಬಂದರೆ ಗಂಡೆಂಬರು**
**ಈ ಉಭಯದ ಜ್ಞಾನ**
**ಹೆಣ್ಣೋ ಗಂಡೋ ನಾಸ್ತಿಕನಾಥ?**

ಆಯ್ದಕ್ಕಿ ಲಕ್ಕಮ್ಮನ ಈ ವಚನ ನಿಸರ್ಗ ಸಹಜವಾದ ಬಾಹ್ಯಚಹರೆಗಳು ಕಾಣಿಸಿಕೊಂಡ ಮಾತ್ರಕ್ಕೆ ಅವು ಬೇಧಕ್ಕೆ ಸಲ್ಲ. ಜ್ಞಾನಕ್ಕೆ ಗಂಡ ಹೆಣ್ಣುಗಳೆಂಬ ಯಾವುದೇ ಭೇದವಿಲ್ಲ ಎನ್ನುತ್ತಾಳೆ.

**ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯವಲ್ಲ**
**ಗಂಡು ಮಾಯೆಯೆಂಬರು ಗಂಡು ಮಾಯವಲ್ಲ**
**ಮನದ ಮುಂದಣ ಆಸೆಯೇ ಮಾಯೇ ಕಾಣ ಗುಹೇಶ್ವರ.**

ಹೆಣ್ಣು ಮಾಯೆಯಾಗಿರದೆ ನಿಜಾರ್ಥದಲ್ಲಿ ಮನುಷ್ಯನ ಆಸೆಯೇ ಮಾಯ ಎಂದೆನ್ನುತ್ತಾನೆ. ಭಾರತೀಯ ಪರಂಪರೆಯಲ್ಲಿ ಹೆಣ್ಣು. ಹೊನ್ನು. ಮಣ್ಣು ಈ ಮೂರನ್ನು ಮಾಯ ಎಂದು ಪರಿಗಣಿಸಿರುವಾಗ ಇಂತಹ ಕಣ್ಕಟ್ಟುಗಳನ್ನು ಹೊಡೆದು ದಿಟವನ್ನು ಸಾರುವ ಯತ್ನಕ್ಕೆ ಮುಂದಾಗುತ್ತಾರೆ.

ಹೆಣ್ಣು ಹೊನ್ನು ಮಣ್ಣು ಗಂಡಿನ ಸೊತ್ತು ಎಂಬ ಮುಖೇಡಿ ತಿಳುವನ್ನು ಬಲವಾಗಿ ವಿರೋಧಿಸಿದವರು ವಚನಕಾರರು ತಮಗೆ ಸಿಕ್ಕ ಮುಕ್ತ ಸಾಮಾಜಿಕ ವಾತಾವರಣದಲ್ಲಿ ಅಕ್ಕಮಹಾದೇವಿ. ನೀಲಾಂಬಿಕೆ ಮುಕ್ತಾಯಕ್ಕ. ಮೋಳಿಗೆ ಮಹಾದೇವಿ. ರೇಚವ್ವೆ. ಆಯ್ದಕ್ಕಿ ಲಕ್ಕಮ್ಮ. ಸೂಳೆ ಸಂಕವ್ವ. ಅಕ್ಕಮ್ಮ, ಗೊಗ್ಗವ್ವ. ಮೊದಲಾದ ಶಿವಶರಣೆಯರು/ವಚನಕಾರ್ತಿಯರು ಒಂದೆಡೆ ಕಳೆತು ಸಾಮಾಜಿಕ

ಸಾಮರಸ್ಯಕ್ಕೆ ವಿಶಿಷ್ಟ ಕೊಡುಗೆ ನೀತಿ ಸಾಹಿತ್ಯ ಸಂಸ್ಕೃತಿಯನ್ನು ಶ್ರೀಮಂತ ಗೊಳಿಸಿದರು. ಬಸವಣ್ಣ ಮತ್ತು ಅಲ್ಲಮನ ಘನ ನೇತೃತ್ವದಲ್ಲಿ ಪುರುಷರಿಗೆ ಸರಿಸಮಕ್ಕೆ ತತ್ವಪ್ರತಿಪಾದನೆ ಮಾಡುವ ಘನವ್ಯಕ್ತಿತ್ವವನ್ನು ವಚನಕಾರ್ತಿಯರು ಬೆಳಸಿಕೊಂಡಿದ್ದರೆಂದರೆ ಆ ಕಾಲದ ವಚನ ಪರಂಪರೆಯ ಲಿಂಗ ಸಮಾನತೆಯ ಉಜ್ವಲತೆಯನ್ನು ಸಾರುತ್ತದೆ.

**ಮೌಢ್ಯ ವಿರೋಧಿ ನಡೆ:**

ಸನಾತನ ಪರಂಪರೆಯ ಮರೆಯಲ್ಲಿ ಮೌಢ್ಯ. ಕಂದಾಚಾರ. ಅಸ್ಪೃಶ್ಯತೆ. ಅಮಾನವೀಯತೆ ಮಡಿ ಮೈಲಿಗೆಗಳನ್ನು ಉಸಿರಾಡುತ್ತಾ 'ಇವನಾರವ' ಎನ್ನುತ್ತಿದ್ದ ಸಮಾಜಕ್ಕೆ ಮುಖಮಾಡಿ 'ಇವ ನಮ್ಮವ' ಎಂದು ಹೇಳಿದವರೆ ವಚನಕಾರರು. ಅಂತ್ಯಜನನ್ನು ಸಂತೈಸಿ ಸಮಾನತೆಯ ಸಹಬಾಳ್ವೆ ತರಲು ಶ್ರಮಿಸಿದವರೇ ಈ ಶರಣರು.

ನಾಗರಿಕ ಧರ್ಮದಲ್ಲಿ ದುರಾಬಿರಕ್ಕೆ ಅವಕಾಶವಿರಬಾರದು. ಸಮಾಜದ ಹಿತವನ್ನುಂಟು ಮಾಡುವ ಧರ್ಮಕ್ಕೆ ಮೌಢ್ಯದ ಬಾಧೆ ಇರಬಾರದು ಆದ್ದರಿಂದ ವಚನಕಾರರು ಕೇವಲ ಆಧ್ಯಾತ್ಮಿಕ ಚಳುವಳಿಯನ್ನು ಕಟ್ಟುವಾಗಿ ಭಕ್ತಿಯ ಮಾರ್ಗದಲ್ಲಿ ಕಂಡ ಮೌಢ್ಯ ಎಂಬ ಪಾಪದ ಪಂಕವನ್ನು ಬುಡಮೇಲುಗೊಳಿಸಿ ನಡೆದಿದ್ದಾರೆ. ಸ್ವರ್ಗ, ನರಕ, ಪಾಪ ಪುಣ್ಯ, ಪುನರ್ಜನ್ಮ, ಜ್ಯೋತಿಷ್ಯ, ಪಂಚಾಂಗ, ವಿಧಿ ಲಿಖಿತ, ವರ್ಗ, ವರ್ಣ, ಅಪಶಕುನ ಇತ್ಯಾದಿ ಕಂದಾಚಾರಗಳನ್ನು ನಂಬಿಕೆಯ ಭಾವನಿಷ್ಟ ಪ¯ಕುಗಳಲ್ಲಿ ಗಟ್ಟಿಗೊಳಿಸಲಾಗಿತ್ತು. ಇಂಥ ಮೌಢ್ಯಗಳು ಆತ್ಮೋದ್ಧಾರದ ಭಕ್ತಿ ಮಾರ್ಗಕ್ಕೆ ಅಡ್ಡಿ ಎಂದೇ ವಚನಕಾರರು ಭಾವಿಸಿದ್ದರು.

ಅರ್ಥವಾಗದ ಅಧ್ಯಾತ್ಮ ಆಚರಣೆಗಳು. ಯಜ್ಞ ಯಾಗಾದಿಗಳು, ಮಂತ್ರ ತಂತ್ರಗಳು, ದೇವಾಲಯ, ಪೂಜೆ ಇತ್ಯಾದಿಗಳನ್ನು ಕೇಂದ್ರವಾಗಿಟ್ಟುಕೊಂಡು ಟೀಕೆಗಳನ್ನು ಮಾಡಿದರು.

**"ನೀರ ಕಂಡಲ್ಲಿ ಮುಳುಗುವವರಯ್ಯ**
**ಮರ ಕಂಡಲ್ಲಿ ಸುತ್ತುವರಯ್ಯ**
**ಬತ್ತುವ ಜಲವ. ಒಣಗುವ ಮರವ ಮೆಚ್ಚಿದರು**
**ನಿನ್ನ ನೆತ್ತ ಬಲ್ಲರು ಕೂಡಲಸಂಗಮದೇವ"**

**"ಉಳ್ಳವರು ಶಿವಾಲಯವ ಮಾಡುವರು**
**ನಾನೇನು ಮಾಡಲಿ ಬಡವನಯ್ಯ**
**ಎನ್ನ ಕಾಲೇ ಕಂಬ ದೇಹವೇ ದೇಗುಲ**
**ವೇದಶಾಸ್ತ್ರ ಪುರಾಣಗಳೆಂಬ ಕೊಟ್ಟಣ ಕುಟ್ಟುತ್ತಾ**
**ನುಚ್ಚುತೌಡು ಕಾಣರೋ"**

**ಹಾವಾಡಿಗನು ಮೂಕೊರತಿಯು**
**ತನ್ನ ಮಗನ ಮದುವೆಗೆ ಶಕುನ ನೋಡು ಹೋಗುವಾಗ**
**ಇದಿರಲೊಬ್ಬ. ಹಾವಾಡಿಗನು ಮೂಕುರತಿಯ ಕಂಡು**
**ಶಕುನವು ಒಲ್ಲೆ ಎಂಬ ಚದುರವ ನೋಡ**
**ನೆಲವೊಂದೇ ಹೊಲಗೇರಿ ಶಿವಾಲಯಕೆ**
**ಜಲ ಒಂದೇ ಶೌಚಾಚಮನಕ್ಕೆ**
**ಕುಲವೊಂದೇ ತನ್ನ ತಾನರಿದವಂಗೆ**
**ಕಲ್ಲು ಮನೆಯ ಮಾಡಿ**
**ಕಲ್ಲು ಕಲ್ಲ ಮೇಲೆ ಕಡೆದರೆ**
**ದೇವರೆತ್ತ ಹೋದರೋ**

ವೇದಪುರಾಣ ದೇವರು ಇತ್ಯಾದಿ ಅಂಶಗಳಲ್ಲಿ ಬೆರೆತು ಹೋಗಿದ್ದ ಮೂಢನಂಬಿಕೆಗಳನ್ನು ವಚನಕಾರರು ವಿರೋಧಿಸಿ. ಮೌಢ್ಯತೆಯ ವಿರುದ್ಧದ ಯುದ್ಧವನ್ನೇ ಸಾರಿದರು. ಸಾಮಾಜಿಕ ಸಮಸ್ಯೆಗಳಿಗೆ ಮೌಢ್ಯಗಳೇ ಕಾರಣ ಎಂದು ಬಲವಾಗಿ ನಂಬಿದ್ದರು. ವೈಜ್ಞಾನಿಕ ತಳಹದಿಯ ಮೇಲೆ ರಚನೆಯಾದ ವಚನಗಳು ಸಾಮಾಜಿಕ ಸಮಾನತೆಯನ್ನು ಎತ್ತಿ ಹಿಡಿಯುವಂತೆ ರಚಿಸಿದರು. ಮೇಲಿನ ವಚನಗಳು ಬೇವಿನಂತೆ ಕಹಿ ಎನಿಸಿದರು ಆಚರಣೆಯಲ್ಲಿ ಬೆಲ್ಲದ ಸವಿಯಂತೆ. ಆದ್ದರಿಂದ ವಚನಗಳನ್ನು ಸೂಕ್ಷ್ಮವಾಗಿ ಗ್ರಹಿಸಬೇಕಾಗುತ್ತದೆ. ಮೂಢನಂಬಿಕೆಗಳು ಜನರನ್ನು ಅಜ್ಞಾನದಿಂದ ಅಸಹಾಯಕತೆಗೆ. ಕತ್ತಲೆಯ ಸ್ಥಿತಿಗೆ ತಳ್ಳುತ್ತವೆ. ಎಂಬುದನ್ನು ವಚನಕಾರರು ಗ್ರಹಿಸಿದ್ದರು. ಪ್ರತಿ ಕೆಲಸಕ್ಕೂ ಬದ್ಧತೆ ಶುದ್ಧತೆ ಬೇಕೇ ಹೊರತು ದಿನ ಮುಹೂರ್ತವಲ್ಲ. ಶುಭ ಅಶುಭವಲ್ಲ. ಎಲ್ಲವನ್ನು ಶಿವನಿಗೆ ಅರ್ಪಿಸಬೇಕು ಎಂದರು.

ಆದ್ದರಿಂದ ವಚನಕಾರರು ಧರ್ಮ. ದೇವರು. ಕಾಯಕ. ಸ್ಥಾವರ. ಜಗ್ಗಮಕ್ಕೆ ಹೊಸ ಅರ್ಥ ನೀಡಿ ಹಳೆಯ ತತ್ವಗಳನ್ನು ನಿರಾಕರಿಸಿ ಹೊಸ ಮಾನವೀಯ ಮೌಲ್ಯಗಳನ್ನು ಬಿತ್ತುವ ಕಾರ್ಯವನ್ನು ಸದ್ದಿಲ್ಲದಂತೆ ಮಾಡಿದರು ಎಂಬುದನ್ನು ಗಮನಿಸಬೇಕಾಗುತ್ತದೆ.

**ಸಮಾರೋಪ:**

12ನೇ ಶತಮಾನದಲ್ಲಿ ನಡೆದ ಕ್ರಾಂತಿಕಾರಕ ಶರಣಚಳುವಳಿ ಜನಮುಖಿ. ಸಮಾಜಮುಖಿ ಆಂದೋಲನದಂತೆಯೇ ಬಾಸವಾಗುತ್ತದೆ. ಅವರ ಸಾಮಾಜಿಕ ಚಿಂತನೆಗಳು ಉಳಿದ ಸಾಹಿತ್ಯ ಪ್ರಕಾರಗಳಿಗೆ ಹೋಲಿಸಿದರೆ. ಮನುಷ್ಯ ಕೇಂದ್ರಿತ ಚಿಂತನ ವಲಯಗಳು ಆಚೆಗೂ ಭಿನ್ನವಾಗಿ ನಿಂತು ಚಿಂತಿಸಿದಂತೆ ಕಾಣುತ್ತದೆ. ಭಾಷೆ, ಶೈಲಿ, ಅಲಂಕಾರ, ಗುರು, ಲಿಂಗ, ಪರಿಸರ, ನಂಬಿಕೆ, ಪ್ರಾಪಂಚಿಕ, ಪಾರಮಾರ್ಥಿಕ ಅನಂತಕಾಲದ ಚಿಂತನೆಗಳನ್ನು ಸಂವಾದಿಸಿದಂತೆ ಕಾಣತೊಡಗುತ್ತಾರೆ. ನವ ಸಮಾಜದ ನಿರ್ಮಿತಿಯ ಸಂಗ್ರಾಮದಲ್ಲಿ ಪಾಲ್ಗೊಂಡು ನವ ಚೈತನ್ಯದ ತಂಗಾಳಿಯನ್ನು

ಎಲ್ಲರೂ ಉಸಿರಾಡುವಂತೆ ಮಾಡಿದರು.

ಅಂದ ಶ್ರದ್ಧ. ಮೂಢನಂಬಿಕೆ. ಕಂದಾಚಾರಗಳು ಜನರಲ್ಲಿ ಪೊಳ್ಳು ಮಾನಸಿಕತೆಯನ್ನು ರೂಪಿಸಿದ್ದವು. ವಚನಕಾರರ ಆಗಮನ ಜನರ ಆಧ್ಯಾತ್ಮ. ಧಾರ್ಮಿಕ. ಸಾಮಾಜಿಕ ಬದುಕಿನಲ್ಲಿ ವಿವೇಕದ ವಿಚಾರದ ಅನುಭವದ ಹಣತೆಯನ್ನು ಹಚ್ಚಿ ಅನಂತಕಾಲದ ದೀಪ ಸ್ತಂಭಗಳಾಗಿ ಭೂತ ವರ್ತಮಾನ ಮತ್ತು ಭವಿಷ್ಯವನ್ನು ಹೊಸ ಸ್ವತಂತ್ರದ ಬೆಳಕಿನಲ್ಲಿ ಮುನ್ನಡೆಯುವಂತೆ ಮಾಡಿದರು.

**ಪರಾಮರ್ಶನ ಗ್ರಂಥಗಳು:**


1. ತಿಪ್ಪೇರುದ್ರಸ್ವಾಮಿ ಹೆಚ್., (2019), ಶರಣರ ಅನುಭಾವ ಸಾಹಿತ್ಯ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.
2. ಶ್ರೀನಿವಾಸಮೂರ್ತಿ ಎಂ.ಆರ್., (1968), ವಚನ ಧರ್ಮಸಾರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ಮಾಧವ ಎಂ.ಕೆ., (2024), ಬಸವಣ್ಣನ ವಚನಗಳಲ್ಲಿ ಸಮ ಸಮಾಜದ ಪ್ರಸ್ತುತತೆ, ಅಕ್ಷರಸೂರ್ಯ (AKSHARASURYA), 4(02), 27 to 32. https://aksharasurya.com/index.php/latest/article/view/427



**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.



**About the License:**
© The Authors 2024. The text of this article is open access and licensed under a Creative Commons Attribution 4.0 International License.